MYSORE LEGISLATIVE ASSEMBLY

THIRTY-FOURTH DAY

Tuesday, 16th June 1964.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.,) in the Chair.

CONDOLENCE REFERENCE

Re : Demise of Sri V. L. Chame Gowda, ex-Member, R. A.

MR. SPEAKER.—I regret to inform the House of the sad demise of Sri V. L. Chame Gowda on 23-4-1964, who was a member of the Representative Assembly from Kankanhalli.

I desire on behalf of the House to express our sense of the loss we have sustained and our sympathy with the relatives of the deceased.

I request the Hon'ble Members to stand in silence for a minute as a mark of respect.

(The Members stood in silence for a minute)

STARRED QUESTIONS

(to whcih oral answers were given)

Failure of Cocoon Crops in Kolar Area

*Q.—19. SRI T. MADIAH GOWDA (Ramanagaram).—

Will the Government be pleased to state :—

(*a*) whether it has come to their notice that cocoon production has failed in Kolar area and the people of that area have complained about it.

(*b*) if so, what is the reason for the same?

A.—Sri B. RACHAIAH (Minister for Forests and Fisheries).—

(a) There were partial failure of cocoon crops to some extent during the months of August and September 1963 in some parts of Kolar Division. Some sericulturists had also brought this to the notice of authorities.

(b) The system of cultivation of mulberry, season of rearing and also the cultural operations for the mulberry are primarily responsible. The conditions of rearing prevalent in the seed area two months earlier will also indirectly be responsible for the failure of crops in the Kolar area where commercial cocoons are produced. The failure of the crop is however not due to any disease.

ಶ್ರೀ ಟಿ. ಮಾದಯ್ಯ ಗೌಡ.—ಕೋಲಾರ ಜಿಲ್ಲೆಯ ವಿಭಾಗದಲ್ಲಿ ರೇಷ್ಮೆ ಬೆಳೆ ಕೆಟ್ಟು ಹೋಗಲು ಕೆಲವು ಕಾರಣಗಳನ್ನು ಉತ್ತರದಲ್ಲಿ ಕೊಡಲಾಗಿದೆ. ಅದರಲ್ಲಿ ಯಾವುದು ಬಹಳ ಮುಖ್ಯವಾಗಿ ಈ ಬೆಳೆ ಕೆಡಲು ಕಾರಣವಾಯಿತು ಮತ್ತು ಅದನ್ನು ನಿವಾರಣೆ ಮಾಡಲು ಇಲಾಖೆಯವರು ಏನು ಕ್ರಮವನ್ನು ತೆಗೆದುಕೊಂಡರು?

ಶ್ರೀ ಬಿ. ರಾಚಯ್ಯ.—ಉತ್ತರದಲ್ಲೇ ಮೂರು ಕಾರಣಗಳನ್ನು ಕೊಡಲಾಗಿದೆ. ಮತ್ತು ಕೆಲವು ಕಡೆ ಬೆಳೆ ಕೆಟ್ಟು ಹೋಗಿದೆ ಎಂದು ನನಗೂ ಕಂಡು ಬಂದಿದೆ. ರೈತರು ಎರಡು ತಿಂಗಳಿಗಿಂತ ಮುಂಚೆಯೇ ಬೆಳೆಯನ್ನು ತೆಗೆಯುವುದರಿಂದ ಹುಳುಗಳು ಹಾಳಾಗುವದು ಮತ್ತು ಶೀತಲವಾದ ಪ್ರದೇಶಗಳಲ್ಲಿ ಎಳಸಾದ ಸೊಪ್ಪನ್ನು ಪಯೋಗಿಸುವದು ಇತ್ಯಾದಿಗಳಿಂದ ಬೆಳೆ ಕೆಡಲು ಕಾರಣವಾಯಿತು. ಇದರ ಬಗ್ಗೆ ರೈತರಿಗೆ ಸರಿಯಾದ ತಿಳಿವಳಿಕೆ ಕೊಡಲು ಇಲಾಖೆಯವರು ಏರ್ಪಾಡು ಮಾಡಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ಅಲ್ಲಿ ರೇಷ್ಮೆ ಬೆಳೆ ಕೆಡಲು ಇಲಾಖೆಯವರು ಸರಿಯಾದ ಬಿತ್ತನೆಯ ಗೂಡುಗಳನ್ನು ಒದಗಿಸದಿರುವುದೇ ಕಾರಣವಾಗಿದೆ. ಆದ್ದರಿಂದ ಇದನ್ನು ವಿಚಾರ ಮಾಡಬೇಕೆಂದು ಕೋಲಾರದಲ್ಲಿರುವ ರೈತರು ಮನವಿಗಳನ್ನು ಕೊಟ್ಟಿದ್ದಾರಲ್ಲವೇ?

ಶ್ರೀ ಬಿ. ರಾಚಯ್ಯ.—ಇಲಾಖೆಯವರು ಬಿತ್ತನೆಯ ಬೀಜಗಳನ್ನು ಪರೀಕ್ಷೆ ಮಾಡಿ ರೈತರಿಗೆ ಹಂಚುತ್ತಾರೆ. ನಾನೂ ಕೂಡ ಕೆಲವು ಸೀಡ್ ಫಾರಂಗಳಿಗೆ ಹೋಗಿ ನೋಡಿ ಬಂದಿದ್ದೇನೆ. ಆದರೆ ಕೆಲವು ಕಡೆ ಕೊಟ್ಟ ಮೊಟ್ಟೆಗಳು ಕೆಟ್ಟು ಹೋಗಿವೆ. ಕೆಲವು ಕಡೆ ಬೆಳೆಗಳು ಚೆನ್ನಾಗಿ ಬಂದಿವೆ. ಆದ್ದರಿಂದ ಬೆಳೆ ಪೂರ್ಣವಾಗಿ ಕೆಟ್ಟಿದೆ ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಇದರಲ್ಲಿ ಕೆಲವು ಕಡೆ ರೈತರುಗಳಿಗೂ ಅನೇಕ ತೊಡಕುಗಳು ಬಂದಿದ್ದುವು. ಇವನ್ನೆಲ್ಲಾ ಇಲಾಖೆಯವರು ನೋಡಿ ಬೆಳೆ ಚೆನ್ನಾಗಿಯಾಗಲು ತಕ್ಕ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಜೆ. ರಾಮೇಗೌಡ.—ಕೋಲಾರದ ಕಡೆಯಿಂದ ದೊಡ್ಡಬಳ್ಳಾಪುರದ ಕಡೆಗೆ ಸರಬರಾಜು ಮಾಡಿರುವ ಬಿತ್ತನೆಯ ಬೀಜವು ಸಮರ್ಪಕವಾಗಿದೆ ಎನ್ನುವುದನ್ನು ವಿಚಾರ ಮಾಡಿದ್ದೀರಾ?

ಶ್ರೀ ಬಿ. ರಾಚಯ್ಯ.—ಜಪಾನಿನಲ್ಲೂ ಬಿತ್ತನೆಯು ಆಷ್ಟು ಸಮರ್ಪಕವಾಗಿಲ್ಲ. ಅದನ್ನು ಅಭಿವೃದ್ಧಿ ಪಡಿಸಲು ಪ್ರಯತ್ನ ನಡೆಯುತ್ತಿದೆ. ಇಲ್ಲಿಯೂ ಕೂಡ ನಡೆಯಬೇಕಾಗಿದೆ.

Sri G. V. GOWDA.—Is it not a fact that the primary reason for the failure of this production is due to non-availability of adequate seed cocoons and also on account of cost of the seed cocoons having shot up?

ಶ್ರೀ ಬಿ. ರಾಚಯ್ಯ.—ಈಗ ಇಲ್ಲಿಯೂ ಸ್ವಲ್ಪ ತೊಂದರೆ ಇದೆ.

Sri G. V. GOWDA.—Is it not a fact that 100 seed cocoons cost Rs. 18 while it cost Rs. 3 last year?

ಶ್ರೀ ಬಿ. ರಾಚಯ್ಯ.—ಈ ಸಾರಿ ಕಳೆದ ಸಾರಿಗಿಂತ ಮಳೆ ಚೆನ್ನಾಗಿ ಆಗಿರುವುದರಿಂದ ಎಲ್ಲ ರೈತರೂ ಏಕ ಕಾಲದಲ್ಲಿ ಮೊಟ್ಟೆಗಳನ್ನು ಕೇಳಿದರು. ಆದರಿಂದಾಗಿ ಸ್ವಲ್ಪ ಬೆಳೆ ಕೆಟ್ಟು ಹೋಗಿದೆ. ಇದರ ಬಗ್ಗೆ ಇಲಾಖೆಯವರು ತಕ್ಕ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ರೇಷ್ಮೆ ಬೆಳೆ ಪೋಷಣೆಗೆ ಪ್ರತಿಕೂಲವಾದ ಪರಿಸ್ಥಿತಿ ಮತ್ತು ಪರೋಕ್ಷವಾದ ಕಾರಣಗಳನ್ನೂ ಉತ್ತರದಲ್ಲಿ ಕೊಡಲಾಗಿದೆ. ಪ್ರತಿಕೂಲವಾದ ಪರಿಸ್ಥಿತಿ ಯಾವುದು ಎನ್ನುವುದನ್ನು ಹೇಳುತ್ತೀರಾ?

ಶ್ರೀ ಬಿ. ರಾಚಯ್ಯ.—ಕಳೆದ ಸಾಲಿನಲ್ಲಿ ಕಕೂನುಗಳು ರೈತರಿಗೆ ಸರಿಯಾಗಿ ಸಿಕ್ಕದೆ ಅದರ ಬೆಲೆ ಕೂಡ ಕೆಲವು ಕಡೆ ಹೆಚ್ಚಿತು. ಅದರಿಂದ ರೈತರು ಎರಡು, ಎರಡೂವರೆ ತಿಂಗಳು ಕಾಯಬೇಕಾಗುತ್ತದೆ ಎಂದು ಒಂದು, ಒಂದೂವರೆ ತಿಂಗಳಲ್ಲೇ ಬೆಳೆ ಮಾಡಬೇಕೆಂದು ಎಳನು ಸೊಪ್ಪನ್ನು ಹುಳಗಳಿಗೆ ತಿನ್ನಿಸುವುದರಿಂದ ಕೆಲವು ಭಾಗದಲ್ಲಿ ಬೆಳೆ ಕೆಡಲು ಕಾರಣವಾಯಿತು. ಜಪಾನ್ ದೇಶದಲ್ಲೂ ಕೂಡ ಫ್ಲಾಟರಿ ಎಂಬ ರೋಗವು ಬೃಹದಾಕಾರವಾಗಿ ಹರಡಿದೆ. ಇನ್ನೂ ಹೆಚ್ಚಿನ ಪ್ರಯೋಗ ಮಾಡಿ ಅದರ ಬಗ್ಗೆ ಪರಿಶೋಧನೆ ನಡೆಸುತ್ತಿದ್ದಾರೆ. ಇದನ್ನು ನಾನು ಹೋಗಿ ನೋಡಿ ಬಂದಿದ್ದೇನೆ.

ಶ್ರೀ ಜಿ. ಎ. ಗೌಡ.—ಬಿತ್ತನೆ ಸರಿಯಾಗಿ ಆಗದೆ ಇರುವುದರಿಂದ ಬೆಲೆ ಏರಲು ಕಾರಣವಾಯಿತಲ್ಲವೇ?

ಶ್ರೀ ಬಿ. ರಾಚಯ್ಯ.—ಕಳೆದ ಸಾರಿ ಹಂಚಿಕೆಯಲ್ಲಿ ಸ್ವಲ್ಪ ತೊಂದರೆಯಾಗಿತ್ತು. ಈ ಸಾರಿ ಅದನ್ನೆಲ್ಲಾ ಸರಿಯಾಗಿ ಮಾಡಲು ಬೇಸಿಕ್ ಸೀಡು ಫಾರಂಗಳಲ್ಲಿ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನುಗ್ಗನಹಳ್ಳಿ ಕಡೆಯಿಂದ ಗೂಡನ್ನು ತಯಾರಿಸಿ ಬಿತ್ತನೆಯ ಬೀಜವನ್ನು ಕೊಡುತ್ತಿರುವುದರಿಂದ ಇಷ್ಟು ಕಷ್ಟವಾಗುತ್ತಿದೆಯಲ್ಲವೇ?

ಶ್ರೀ ಬಿ. ರಾಚಯ್ಯ.—ನುಗ್ಗನಹಳ್ಳಿ ಕಡೆಯ ರೈತರೇ ಈಗ ಬಂದು ನಮಗೆ ಬಿತ್ತನೆಯ ಗೂಡನ್ನು ತಯಾರಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿದರು. ಅದರಂತೆ ಈಗ ಅವಕಾಶ ಮಾಡಿ ಕೊಟ್ಟಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪೋಷಣೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರಿಂದ ಇದರ ಬೆಲೆ ನೂರಕ್ಕೆ ಇಪ್ಪತ್ತು ರೂಪಾಯಿಗಳಷ್ಟು ಹೆಚ್ಚಾಗಲು ಕಾರಣವಾಯಿತಲ್ಲವೇ? ಇದು ನರ ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಬಿ. ರಾಚಯ್ಯ.—18 ರೂಪಾಯಿಗಳವರೆಗೆ ಬೆಲೆ ಏರಿತು ಎಂದು ತಿಳಿದು ಬಂದಿದೆ. ಈಗ ಅದನ್ನು ಕಡಿಮೆ ಮಾಡುವುದಕ್ಕೆ ಪಯತ್ನ ಮಾಡುತ್ತಿದ್ದೇವೆ.

Basis adopted to form Divisions in the M.S.R.T.C. in the State

*Q.—21. Sri S. P. PHAYADE (Ankola).—

Will the Government be pleased to state :—

(*a*) the basis adopted to form Divisions in the Mysore State Road Transport Corporation in the State ;

(*b*) the number of Divisions of Mysore State Road Transport Corporation working in Mysore State and the revenue in each Division for the past 3 years ;

(*c*) the revenue from North Kanara Division during the above period ;

(*d*) the details of the new routes proposed to be opened in the North Kanara District and the details of proposals pending ?

A.—Sri D. DEVARAJ URS (Minister for Labour, Housing and Transport).—

(*a*) Homogeneity of traffic flow, administrative convenience and control, proximity of the operating units to the Division Headquarters and the strength of operating fleet are the basis adopted.